ಕರ್ನಾಟಕ ವಿಧಾನ ಪರಿಷತ್

| | |
|---|---|
| ವಿಧಾನ ಪರಿಷತ್ ಸದಸ್ಯರ ಹೆಸರು : | ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : | 177 + 809 605 (809) |
| ಉತ್ತರಿಸಬೇಕಾದ ದಿನಾಂಕ : | 11-03-2020 |
| ಉತ್ತರಿಸುವ ಸಚಿವರು : | ವಸತಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕೊಳಗೇರಿ ಯುವಕರ ಜೀವನ ರೂಪಿಸುವ ನಿಟ್ಟಿನಲ್ಲಿ ಅಲ್ಲಿನ ಯುವಕ ಯುವತಿಯರಿಗೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಭಾಗವಹಿಸಲು ತರಬೇತಿ ಶಿಕ್ಷಣ ಕೊಡುವ ಬಗ್ಗೆ ಸರ್ಕಾರದ ನಿಲುವೇನು: | ಈ ಬಗ್ಗೆ ಪ್ರತ್ಯೇಕ ಯೋಜನೆಗಳು ಯಾವುದೂ ಇರುವುದಿಲ್ಲ. |
| (ಆ) | ಕೊಳಗೇರಿ ಯುವಕ ಯುವತಿಯರಿಗೆ ಉನ್ನತ ವ್ಯಾಸಂಗ ಮಾಡಲು ವಿಶೇಷ ತರಬೇತಿಯನ್ನು ನೀಡುವ ಯಾವ ಯಾವ ಯೋಜನೆಗಳಿವೆ; (ವಿವರ ಒದಗಿಸುವುದು) | |
| (ಇ) | ಕೊಳಗೇರಿ ಅಭಿವೃದ್ಧಿ ಸಂಸ್ಥೆಯ ಮುಖಾಂತರ ಯುವಕ ಯುವತಿಯರಿಗೆ ಕೆ.ಎ.ಎಸ್. ಮತ್ತುಐ.ಎ.ಎಸ್. ಉದ್ಯೋಗ ಪಡೆಯುವ ನಿಟ್ಟಿನಲ್ಲಿ ತರಬೇತಿ ನೀಡಲಾಗುತ್ತಿದೆಯೇ; | ಬೆಂಗಳೂರು ನಗರದ ಘೋಷಿತ ಕೊಳಗೇರಿಗಳಲ್ಲಿ ವಾಸಿಸುವ ವಿದ್ಯಾವಂತ ನಿರುದ್ಯೋಗಿ ಯುವಕರಿಗೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉದ್ಯೋಗ ಪಡೆಯಲು ದಿನಾಂಕ: 10-07-2019 ರ ಸರ್ಕಾರಿ ಆದೇಶದಂತೆ ತರಬೇತಿ ನೀಡಲು ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಕಾರ್ಯದೇಶವನ್ನು ನೀಡಲಾಗಿರುತ್ತದೆ. |
| (ಈ) | ನೀಡುತ್ತಿದ್ದಲ್ಲಿ ತರಬೇತಿಗೆ ಆಯ್ಕೆಗೆ ಯಾವ ಮಾನದಂಡವನ್ನು ರೂಪಿಸಲಾಗಿದೆ; ಹಾಗೂ ಯಾವಯಾವ ಸಂಸ್ಥೆಗೆ ನೀಡಲಾಗಿದೆ. | ತರಬೇತಿಗೆ ಆಯ್ಕೆ ಮಾಡಲು ಬೆಂಗಳೂರು ನಗರದ ಕೊಳಚೆ ಪ್ರದೇಶದಲ್ಲಿ ವಾಸಿಸಿರುವ ಬಗ್ಗೆ ಪರಿಚಯ ಪತ್ರ ಮತ್ತು ಆಧಾರ್ ಕಾರ್ಡ್‌ಗಳನ್ನು ಪಡೆಯಬೇಕಾಗಿರುತ್ತದೆ.<br><br>ಮೆ: ಸಾಧನಾ ಸ್ಪರ್ಧಾತ್ಮಕ ಕೋಚಿಂಗ್ ಸೆಂಟರ್, ನಂ.216, 16ನೇ ಕ್ರಾಸ್, ಎಂ.ಸಿ.ಲೇಔಟ್, ವಿಜಯನಗರ, ಬೆಂಗಳೂರು ಸಂಸ್ಥೆಗೆ ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ದಿನಾಂಕ: 16-07-2019 ರಂದು ಕಾರ್ಯಾದೇಶ ನೀಡಲಾಗಿದೆ. |
| (ಉ) | ತರಬೇತಿ ಪಡೆಯಲು ನಿಗದಿಪಡಿಸಿರುವ ಅನುದಾನವೆಷ್ಟು; ಈವರೆಗೆ ತರಬೇತಿ ಪಡೆದ ಫಲಾನುಭವಿಗಳ ಸಂಪೂರ್ಣ ವಿವರ ನೀಡುವುದು? | ತರಬೇತಿ ಪಡೆಯಲು 300 ಅಭ್ಯರ್ಥಿಗಳಿಗೆ ತಲಾ ರೂ.35,000/- ರಂತೆ ಒಟ್ಟು ರೂ.1.05 ಕೋಟಿಗಳಾಗಿರುತ್ತದೆ. ತರಬೇತಿ ನೀಡಿರುವ ಸಂಸ್ಥೆಯು ದಿನಾಂಕ: 10-07-2019 ರ ಆದೇಶದಂತೆ ಮತ್ತು ಮಂಡಳಿಯೊಂದಿಗೆ ಮಾಡಿಕೊಂಡಿರುವ ಕರಾರಿನಂತೆ |

| | | |
|---|---|---|
| | | ಬೆಂಗಳೂರು ನಗರದ ಕೊಳಚೆ ಪ್ರದೇಶದಲ್ಲಿ ವಾಸಿಸುವ ವಿದ್ಯಾವಂತ ನಿರುದ್ಯೋಗಿಗಳಿಗೆ 3 ತಿಂಗಳ ಕಾಲ ವಿವಿಧ ಕೋರ್ಸ್‌ಗಳಿಗೆ ತರಬೇತಿ ನೀಡಿ, ತರಬೇತಿ ನೀಡಿರುವ ಬಗ್ಗೆ ಅಭ್ಯರ್ಥಿಯ ವಿವರ, ಹಾಜರಾತಿ ಪಟ್ಟಿ, ಕೊಳಚೆ ಪ್ರದೇಶದ ನಿವಾಸಿಯಾಗಿರುವ ಬಗ್ಗೆ ಕೊಳಚೆ ಪ್ರದೇಶದ ಪರಿಚಯ ಪತ್ರ / ಆಧಾರಕಾರ್ಡ್, ಕೋರ್ಸ್ ಸರ್ಟಿಫಿಕೇಟ್ ಗಳನ್ನು ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರಿಂದ ಧೃಡೀಕರಿಸಿ ನೀಡಬೇಕಾಗಿರುತ್ತದೆ. ಆದರೆ ತರಬೇತಿ ಸಂಸ್ಥೆಯು ನಿಗದಿಪಡಿಸಿರುವ ದಾಖಲೆಗಳೊಂದಿಗೆ ನಿಯಮಾನುಸಾರ ಅಭ್ಯರ್ಥಿಗಳ ಪಟ್ಟಿಯನ್ನು ಸಲ್ಲಿಸದೇ ಇರುವ ಕಾರಣ ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಸದರಿ ತರಬೇತಿ ಸಂಸ್ಥೆಗೆ ಯಾವುದೇ ಹಣವನ್ನು ಇದುವರೆಗೂ ಬಿಡುಗಡೆ ಮಾಡಿರುವುದಿಲ್ಲ. |

ಕಡತ ಸಂಖ್ಯೆ: DOH/32/SBM/2020

(ವಿ.ಸೋಮಣ್ಣ)
ವಸತಿ ಸಚಿವರು.